ಶ್ರೀಮತಿ ಅನುಸೂಯಮ್ಮ ನಟರಾಜ್ ಕೆ. (ಚಿಕ್ಕಬಳ್ಳಾಪುರ): ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಿಟ್ಟು ಉತ್ತರಿಸುವರೆ?

ಅ) ಚಿಕ್ಕಬಳ್ಳಾಪುರ ತಾಲ್ಲೂಕು ಕೇಂದ್ರದಲ್ಲಿ ಸರ್.ಎಂ.ವಿಶ್ವೇಶ್ವರಯ್ಯ ಕ್ರೀಡಾಂಗಣದ ಕಾಮಗಾರಿಯು ಅಪೂರ್ಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಪೂರ್ಣಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್ (ಯುವಜನ ಸೇವೆಗಳು ಹಾಗೂ ಕ್ರೀಡಾ ರಾಜ್ಯ ಸಚಿವರು):

ಅ) ಹೌದು.

ಆ) ಕ್ರೀಡಾಂಗಣ ಕಾಮಗಾರಿ ಹಣದ ಕೊರತೆಯಿಂದ ಸ್ಥಗಿತಗೊಂಡಿದೆ. ರಾಜ್ಯ ವಲಯದಡಿ ಈವರೆಗೂ ರೂ.೧೫.೦೦ ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಹಾಗೂ ಕೇಂದ್ರ ಸರ್ಕಾರದ ಅನುದಾನ ಪಡೆಯಲು ಸೂಕ್ತಕ್ರಮ ಕೈಗೊಳ್ಳಲಾಗುವುದು.

ಸೂಳ್ಯ ಕ್ಷೇತ್ರದ ರಸ್ತೆಗಳಲ್ಲಿನ ಗುಂಡಿಗಳ ದುರಸ್ತಿ

೮೬೩(೩೨೮೮)

ಶ್ರೀ ಎಸ್.ಅಂಗಾರ(ಸೂಳ್ಯ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಿಟ್ಟು ಉತ್ತರಿಸುವರೆ?

೧. ಸೂಳ್ಯ ಪಧಾನಸಭಾ ಕ್ಷೇತ್ರ ವ್ಯಾಪ್ತಿಗೆ ದರ್ಬೆ-ಕಾಣಿಯೂರು-ಸುಬ್ರಹ್ಮಣ್ಯ ರಸ್ತೆಯ ಎರಡು ಪಕ್ಕದಲ್ಲಿ ಗುಂಡಿಗಳು ಬಿದ್ದಿರುವುದಲ್ಲದೆ ರಸ್ತೆ ಮಧ್ಯೆ ಗುಂಡಿಗಳು ಬಿದ್ದು ವಾಹನ ಸಂಚಾರಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

೨. ಬಂದಿದ್ದಲ್ಲಿ ಈ ಬಗ್ಗೆ ಯಾವ ಕ್ರಮವನ್ನು ಕೈಗೊಳ್ಳಲಾಗುವುದು? (ಏವರ ನೀಡುವುದು)

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

೧. ಈ ರಸ್ತೆಗಳ ದುರಸ್ತಿಯ ಅವಶ್ಯಕತೆ ಸರ್ಕಾರದ ಗಮನಕ್ಕೆ ಬಂದಿದೆ.

೨. ಸದರಿ ರಸ್ತೆಯನ್ನು ಯೋಜನೇತರ ವಾರ್ಷಿಕ ಅನುದಾನದಲ್ಲಿ ಗುಂಡಿ ಮುಚ್ಚಿ ವಾಹನ ಸಂಚಾರಕ್ಕೆ ಸುಗಮವಾಗಿಡಲಾಗಿದೆ. ೨೦೦೦-೦೧ನೇ ಸಾಲಿನಲ್ಲಿ ೨.೨೫ ಲಕ್ಷದಲ್ಲಿ ದುರಸ್ತಿ ೪.೧೪ ಲಕ್ಷ ರೂ.ಗಳಲ್ಲಿ ವಿಶೇಷ ದುರಸ್ತಿ ಹಾಗೂ ೧೦ ಲಕ್ಷದಲ್ಲಿ ನವೀಕರಣ ಮಾಡಲಾಗಿದೆ. ೨೦೦೧-೦೨ನೇ ಸಾಲಿನಲ್ಲಿ ೯.೩೬ ಲಕ್ಷದಲ್ಲಿ ವಾರ್ಷಿಕ ದುರಸ್ತಿ ಹಾಗೂ ೨.೨೫ ಲಕ್ಷ ರೂ.ಗಳಲ್ಲಿ ವಿಶೇಷ ದುರಸ್ತಿ ಕಾಮಗಾರಿ ಕೈಗೊಳ್ಳಲಾಗಿರುತ್ತದೆ.

ಮೈಸೂರು-ಭಂಟ್ವಾಳ ರಸ್ತೆಯು ಸುಳ್ಯ ತಾಲ್ಲೂಕಿನಲ್ಲಿರುವ ಸೇತುವೆ ಕಾಮಗಾರಿ.

೨೯೬೪(೩೨೯೯)

ಶ್ರೀ ಅಂಗಾರ ಎಸ್.(ಸುಳ್ಯ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು-ಭಂಟ್ವಾಳ ರಾಜ್ಯ ರಸ್ತೆಯ ಸುಳ್ಯ- ತಾಲ್ಲೂಕಿನಲ್ಲಿ ಹಾದು ಹೋಗುತ್ತಿದ್ದು ಸದರಿ ರಸ್ತೆಗೆ ಮಾರ್ಗಪಣೆ ಎಂಬಲ್ಲಿ ಸೇತುವೆ ಕಾಮಗಾರಿಯನ್ನು ಎಂದಿನಿಂದ ಪ್ರಾರಂಭಿಸಲಾಯಿತು? ಪ್ರಾರಂಭಿಸಿ ಅರ್ಧದಲ್ಲಿ ನಿಲ್ಲಿಸಿರುವುದಕ್ಕೆ ಕಾರಣವೇನು? (ಏವರ ನೀಡುವುದು)

ಆ) ಸದರಿ ಕಾಮಗಾರಿಯ ಗುತ್ತಿಗೆಯನ್ನು ಯಾರಿಗೆ ನೀಡಲಾಗಿದೆ? (ಏವರ ನೀಡುವುದು)

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ಮೈಸೂರು-ಭಂಟ್ವಾಳ ತಾಲ್ಲೂಕಿನ ಮಾರ್ಗಪಣೆ ಎಂಬಲ್ಲಿ ಕಂಡಕಾ ಹೊಳೆಗೆ, ಸೇತುವೆಯ ನಿರ್ಮಾಣ ಕಾರ್ಯವನ್ನು ಜನವರಿ ೨೦೦೧ರಲ್ಲಿ ಪ್ರಾರಂಭಿಸಲಾಯಿತು. ಸೇತುವೆಯ ಎರಡು ಕಡೆಯ ಕೂಡು ರಸ್ತೆಯ ನಿರ್ಮಾಣಕ್ಕಾಗಿ ಭೂಸ್ವಾಧೀನ ಕಾರ್ಯವಾಗಬೇಕಾಗಿರುವುದರಿಂದ, ಕೆಲಸವು ಸ್ಥಗಿತಗೊಂಡಿದೆ. ಈಗ ಭೂಸ್ವಾಧೀನ ಕಾರ್ಯದ ಪ್ರಕ್ರಿಯೆಯು ನಡೆದಿದ್ದು ಮಳೆಗಾಲದ ನಂತರ ಅಕ್ಟೋಬರ್ ೨೦೦೧ರಲ್ಲಿ ಕೆಲಸವನ್ನು ಪುನಃ ಪ್ರಾರಂಭಿಸಲಾಗುವುದು.